ಶ್ರೀ ಎಂ.ಎಸ್. ಆತ್ಮಾನಂದ:– ಕಳೆದ ಐದು ವರ್ಷಗಳಿಂದ ಕಲಾವಿದರಿಗೆ ಮಾಸಾಶನವನ್ನು ಕೊಡುತ್ತಿಲ್ಲ. ಈ ಮಾಸಾಶನವನ್ನು ಮಂಜೂರು ಮಾಡದಿರುವುದಕ್ಕೆ ಆರ್ಥಿಕ ಕೊರತೆ ಕಾರಣ ಎಂದು ಹೇಳಿದ್ದಾರೆ. ಈ ಒಂದು ಮಾಸಾಶನಕ್ಕೆ ಬಹಳಷ್ಟು ಜನರು ಬೇಡಿಕೆ ಸಲ್ಲಿಸಿ ಕಾಯುತ್ತಿದ್ದಾರೆ. ಇದರ ಬಗ್ಗೆ ಶೀಘ್ರವಾಗಿ ಏನಾದರೂ ಪ್ರಯತ್ನವನ್ನು ಮಾಡುತ್ತಾರೆಯೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್:– ಸುಮಾರು 87ನೇ ಇಸವಿಯಿಂದಲೂ ಕೂಡ ಈ ಕಲಾವಿದರಿಗೆ ಮಾಸಾಶನವನ್ನು ಕೊಡತಕ್ಕಂಥದ್ದನ್ನು ಸ್ಥಗಿತ ಮಾಡಲಾಗಿದೆ. ಹೊಸದಾಗಿ ಮಂಜೂರು ಮಾಡತಕ್ಕಂಥದ್ದನ್ನು ಸ್ಥಗಿತ ಮಾಡಲಾಗಿದೆ. ಆದರೆ 3771 ಜನ ಕಲಾವಿದರುಗಳಿಗೆ ಈಗಾಗಲೇ ಸರ್ಕಾರದವರು ಕೊಡುತ್ತಿದ್ದಾರೆ. ಅದನ್ನು ನಿಲ್ಲಿಸಿಲ್ಲ. ಸಾವಿರಾರು ಅರ್ಜಿಗಳು ಏನು ಇವೆ ಅವುಗಳನ್ನು ಇನ್ನೊಂದು ತಿಂಗಳಲ್ಲಿ ಅದನ್ನು ಪರಿಷ್ಕರಣೆ ಮಾಡಿ ಆಕಾಡೆಮಿಗಳ ಮೂಲಕ ಶೀಘ್ರವಾಗಿ ಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ರಾಜ್ಯಕ್ಕೆ ಬರುವ ಪ್ರವಾಸಿಗಳ ಸಂಖ್ಯೆ

94 (25) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):–

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992–93ನೇ ಸಾಲಿನಲ್ಲಿ ರಾಜ್ಯಕ್ಕೆ ಬಂದ ಪ್ರವಾಸಿಗರ ಸಂಖ್ಯೆ ಎಷ್ಟು;

ಆ) ದೇಶೀಯ ಮತ್ತು ವಿದೇಶಿಯ ಪ್ರವಾಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಸರ್ಕಾರ ಹಮ್ಮಿಕೊಂಡಿರುವ ಹೊಸ ಕಾರ್ಯಕ್ರಮಗಳೇನು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ) 1992–93ರ ಅಂಕಿ ಅಂಶಗಳು 31 ನೇ ಮಾರ್ಚಿ 93ರ ನಂತರ ತಿಳಿಯುತ್ತದೆ.

ಆ) 1. ಪ್ರವಾಸೋದ್ಯಮ ಯೋಜನೆಗಳನ್ನು ಖಾಸಗಿ ಉದ್ಯಮಿಗಳು ಕೈಗೊಳ್ಳಲು ಉತ್ತೇಜಿಸಲು ಅನೇಕ ರಿಯಾಯಿತಿ ಮತ್ತು ಉತ್ತೇಜನಗಳನ್ನೊಳಗೊಂಡ ಕರ್ನಾಟಕ ಪ್ರವಾಸೋದ್ಯಮ ನೀತಿ ಪ್ರಕಟಣೆ.

2. ಸಾಹಸ ಪ್ರವಾಸೋದ್ಯಮ ಅಭಿವೃದ್ಧಿ.

3. ರಾಷ್ಟ್ರೀಯ ಉತ್ಸವಗಳ ಆಚರಣೆ ಜೊತೆಗೆ ಜಿಲ್ಲಾವಾರು ಪ್ರವಾಸೋದ್ಯಮ ಉತ್ಸವ ಆಚರಣೆ.

4. ಪ್ರೇಕ್ಷಣೀಯ ಸ್ಮಾರಕಗಳ ಅಂದ ಹೆಚ್ಚಿಸಲು ಹೊನಲು ಬೆಳಕು ವ್ಯವಸ್ಥೆ.

5. ಬಣ್ಣದ ಕಿರುಹೊತ್ತಿಗೆ ಹಾಗೂ ವೀಡಿಯೋ ಫಿಲಂ ನಿರ್ಮಾಣ.

6. ಪ್ರೇಕ್ಷಣೀಯ ಸ್ಥಳಗಳಲ್ಲಿ ಮಾರ್ಗದರ್ಶಿ ಸೌಲಭ್ಯ ಒದಗಿಸಲು ಮಾರ್ಗದರ್ಶಿ ತರಬೇತಿ ನೀಡುವ ಕಾರ್ಯಕ್ರಮ.

7. ಯಾತ್ರೆ ಕೇಂದ್ರಗಳ ಅಭಿವೃದ್ಧಿ

ಶ್ರೀ ಕೆ. ಹರ್ಷಕುಮಾರ ಗೌಡ:– ಮಾನ್ಯ ಅಧ್ಯಕ್ಷರೇ ನಾನು ಕೇಳಿದ ಪ್ರಶ್ನೆಗೆ 1992–93ನೇ ಸಾಲಿನಲ್ಲಿ ರಾಜ್ಯದ ಪ್ರವಾಸಿಗರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಅದು ಮಾರ್ಚಿ ನಂತರ ನೀಡುತ್ತೇವೆ ಎಂದು ಹೇಳಿ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಜೊತೆಗೆ ಕರ್ನಾಟಕ ರಾಜ್ಯಕ್ಕೆ ಬರುವಂಥ

ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದಕ್ಕೆ ಏನೇನು ರೀತಿಯ ವ್ಯವಸ್ಥೆಗಳನ್ನು ಸರ್ಕಾರ ಮಾಡಿದೆ ? ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ಕೇಳಿದ್ದಕ್ಕೆ ನಾಲ್ಕೈದು ತರಹದ ಉತ್ತರಗಳನ್ನು ಕೊಟ್ಟಿದ್ದಾರೆ. ನಾನಾದರೂ ಕೂಡ ತಮ್ಮ ಮೂಲಕ ಮಂತ್ರಿಗಳನ್ನು ಕೇಳುತ್ತೇನೆ, ಮೈಸೂರು ಜಿಲ್ಲೆಯಲ್ಲಿ ಸುಮಾರಾಗಿ ಮೈಸೂರು ಜಿಲ್ಲೆ ಜೊತೆಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮೈಸೂರು ಜಿಲ್ಲೆಯ ಸೋಮನಾಥಪುರ, ಬಂಡಿಪುರ, ಅದಕ್ಕೆ ಹೊಂದಿಕೊಂಡಂತೆ ನಾಗರಹೊಳೆ, ಕಾರಾಪುರ, ಮೈಸೂರು ನಗರದ ಅರಮನೆ, ಮೃಗಾಲಯ, ಚಾಮರಾಜೇಂದ್ರ ವಸ್ತು ಪ್ರದರ್ಶನ ಇವುಗಳನ್ನು ನೋಡುವುದಕ್ಕೆ ಬರುವಂಥ ಪ್ರವಾಸಿಗರಿಗೆ ಮಾಹಿತಿಯನ್ನು ಕೊಡುವಂಥ ಸರಿಯಾದಂಥ ವ್ಯವಸ್ಥೆ ಇಲ್ಲ. ಹಲವಾರು ವರ್ಷಗಳಿಂದಲೂ ಪ್ರವಾಸೋದ್ಯಮ ಮಂತ್ರಿಗಳು ಅಲ್ಲಿ ಬೆಳಕು ಮತ್ತು ಶಬ್ದದ ವ್ಯವಸ್ಥೆ (ಲೈಟ್ ಅಂಡ್ ಸೌಂಡ್) ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳುತ್ತಿರುತ್ತಾರೆ. ಆದರೆ ಇದುವರೆಗೂ ಕೂಡ ಅದು ಕಾರ್ಯಗತವಾಗಿಲ್ಲ. ಇದರ ಜೊತೆಗೆ ಮೈಸೂರು ಜಿಲ್ಲೆಯ ನಮ್ಮ ವೆಂಕಟೇಶ್ ಕ್ಷೇತ್ರ ಕಾರಾಪುರ ಜಂಗಲ್ ಲಾಡ್ಜ್‌ಗೆ ಫ್ರಾನ್ಸ್‌ನಿಂದ, ಸಿಂಗಾಪೂರ್‌ನಿಂದ, ಹಾಂಕಾಂಗ್‌ನಿಂದ ಪ್ರವಾಸಿಗರು ಬರುತ್ತಾರೆ.

ಅವರು ಬರುವುದಕ್ಕೆ ಯಾವುದೇ ರೀತಿ ವಿಮಾನ ವ್ಯವಸ್ಥೆಯಾಗಲಿ ಕರ್ನಾಟಕಕ್ಕೆ ಬಂದು ಮತ್ತೆ ಖಾರಾಪುರಕ್ಕೆ ಹೋಗುವುದಕ್ಕೆ ರಸ್ತೆ ವ್ಯವಸ್ಥೆಯಾಗಲಿ, ಅವರಿಗೆ ಮಾಹಿತಿ ಕೊಡುವಂತಹ ವ್ಯವಸ್ಥೆಯಾಗಲೀ ಇಲ್ಲ. ಇದರ ಜೊತೆಗೆ ಮೂರನೆಯದಾಗಿ ಮೇಕೆದಾಟು ಇದೆ. ಮೇಕೆದಾಟಿನಲ್ಲಿ ಸಹಸ್ರಾರು ಜನ ರಾಜ್ಯದ ಹಾಗೂ ಹೊರ ರಾಜ್ಯದ ಪ್ರವಾಸಿಗಳು ಬರುತ್ತಾರೆ. ಅಲ್ಲಿ ನೀರು ಇದ್ದರೂ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ರಸ್ತೆ ಇಲ್ಲ. ಪ್ರವಾಸೋದ್ಯಮ ಇಲಾಖೆ ಇದನ್ನು ಏಕ್ಕೆ ಕಡೆಗಣಿಸುತ್ತಿದೆ ಮತ್ತು ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಿದ್ದೇರೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಹರ್ಷಕುಮಾರಗೌಡರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಆದರೂ ಅವರು ಕೆಲವು ಮೈಸೂರು, ಮಂಡ್ಯ ಮತ್ತು ಮೈಸೂರು ಅರಮನೆ, ಖಾರಾಪುರ್ ಇಂತಹ ಪ್ರೇಕ್ಷಣೀಯ ಸ್ಥಳಗಳಲ್ಲಿ ಕೆಲವು ಪ್ರವಾಸಿಗರಿಗೆ ಅನುಕೂಲವನ್ನು ಮಾಡಿಕೊಡಲು ಸರ್ಕಾರ ಏನು ಮಾಡುತ್ತಿದೆ ಎಂದು ಕೇಳುತ್ತಿದ್ದಾರೆ. ಈ ಸ್ಥಳಗಳಲ್ಲಿ ಈಗಾಗಲೇ ನಾವು ನಮ್ಮ ಸರ್ಕಾರ ಘೋಷಿಸಿದಂತೆ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕರ್ನಾಟಕ ಪ್ರವಾಸೋದ್ಯಮ ನೀತಿಯನ್ನು ದಿನಾಂಕ: 30–5–92ರಲ್ಲಿ ಸರ್ಕಾರ ಘೋಷಿಸಿದೆ. ಪ್ರವಾಸೋದ್ಯಮ ಯೋಜನೆಗಳಲ್ಲಿ ಖಾಸಗಿ ಉದ್ಯಮಗಳನ್ನು ತೊಡಗಿಸಲು ಉತ್ತೇಜಿಸುವುದೇ ಸರ್ಕಾರದ ನೀತಿಯಾಗಿದೆ. ಈ ನಿಲುವಿನಲ್ಲಿ ಸಬ್ಸಿಡಿ ರಿಯಾಯಿತಿ, ನೋಂದಣಿ ರಿಯಾಯಿತಿ ಮತ್ತು ಸ್ಟ್ಯಾಂಪ್ ಡ್ಯೂಟಿ ಮನ್ನ, ಮಾರಾಟ ಹಾಗೂ ತೆರಿಗೆ ರಿಯಾಯಿತಿಗಳು, ಕೈಗಾರಿಕೆಗಳಿಗೆ ನೀಡುವಂತಹ ದಿಸೆಯಲ್ಲಿ ವಿದ್ಯುಚ್ಛಕ್ತಿ ಪೂರೈಕೆ ಸಂಪ್ರದಾಯವಲ್ಲದ ಇಂಧನ ಬಳಕೆಗೆ ಉತ್ತೇಜನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಲ್ಪ ಸಂಖ್ಯಾತ ವರ್ಗ ಅಂಗವಿಕಲರು ಮಾಜಿ ಸೈನಿಕರು, ವಿಶೇಷ ವರ್ಗದ ಉದ್ಯಮಿಗಳಿಗೆ ಹೆಚ್ಚು ರಿಯಾಯಿತಿ ದೊಡ್ಡ ಬಂಡವಾಳ ಹೂಡಿಕೆಗೆ ಹೆಚ್ಚು ರಿಯಾಯಿತಿ ಉತ್ತೇಜನ ಒಳಗೊಂಡಿವೆ. ಪ್ರವಾಸೋದ್ಯಮದಲ್ಲಿ ಎಲ್ಲಾ ಖಾಸಗಿಯವರು ಮುಂದೆ ಬರುವುದಿಲ್ಲವೋ ಅಂತಹ ಕಡೆ ಸರ್ಕಾರದವರು ಹೋಟೆಲ್‌ಗಳನ್ನಾಗಲಿ, ಲಾಡ್ಜ್‌ಗಳನ್ನಾಗಲಿ ಕಟ್ಟಲು ಪ್ರೋಗ್ರಾಮ್‌ಗಳನ್ನು ಹಾಕಿಕೊಂಡಿದ್ದೇವೆ. ಕೆಲವು ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದಿಂದ ನೆರವು ಬರುತ್ತದೆ. ಕೆಲವು ರಾಜ್ಯ ಸರ್ಕಾರದಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ? ಮೈಸೂರು ಅರಮನೆಯಲ್ಲಿ ಮತ್ತು ಖಾರಾಪುರ ಕಡೆ ಅಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

1993–94ನೇ ಸಾಲಿಗೆ ಆ ಪ್ರೋಗ್ರಾಂಗಳನ್ನು ಕಂಪ್ಲೀಟ್ ಮಾಡುತ್ತೇವೆ ಎನ್ನುವಂತಹ ಭರವಸೆ ನಮಗೆ ಇದೆ. ಮೇಲುಕೋಟೆಯಲ್ಲಿ ಈಗ ಒಂದು ಹೊಟೇಲ್ ಕಟ್ಟಲಾಗಿದೆ. ಅಲ್ಲಿ ರೋಡ್ ಬಗ್ಗೆ ಹೇಳಿದ್ದಾರೆ, ರೋಡ್ ಬಗ್ಗೆ ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ಗೆ ನಾವು ಕೂಡ ನಮ್ಮ ಇಲಾಖೆಯಿಂದ ಕಾಗದ ಬರೆದು ಆ ರೋಡನ್ನು ಸರಿಪಡಿಸಬೇಕೆಂದು ಕೇಳಿಕೊಂಡಿದ್ದೇವೆ.

ಶ್ರೀ ಕೆ. ಹರ್ಷಕುಮಾರು ಗೌಡ:– ಖಾರಾಪುರ ರಸ್ತೆ ಬಗ್ಗೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಖಾರಾಪುರ ರಸ್ತೆಯ ಬಗ್ಗೆ ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟಿಗೆ ಒಂದು ಪತ್ರವನ್ನು ಬರೆದು ರೋಡ್ ಅನ್ನು ರಿಪೇರಿ ಮಾಡುವುದಕ್ಕೆ ಪ್ರಾರ್ಥಿಸಿಕೊಂಡಿದ್ದೇವೆ ಮತ್ತು ಇನ್ನಿತರ ಯೋಜನೆಗಳನ್ನು ಮಾಡುತ್ತೇವೆ. ಈಗ ಪ್ರವಾಸೋದ್ಯಮ ಒಂದು ದೊಡ್ಡ ಉದ್ದಿಮೆಯಾಗಿದೆ. ಆ ಉದ್ದಿಮೆಯನ್ನು ಪ್ರೋತ್ಸಾಹಿಸಲು ಖಾಸಗಿಯವರಿಗೆ ನಾವು ಸಬ್ಸಿಡಿಯನ್ನು ರಿಯಾಯಿತಿಯನ್ನು ಶೇಕಡ 25 ರವರೆಗೆ ಕೊಡುತ್ತೇವೆ. ಯಾರೇ ಖಾಸಗೀಯವರು ಮುಂದೆ ಬಂದರೆ ಕೊಡುತ್ತೇವೆ. ಅಂತಹ ಮುಂದೆ ಬಂದವರಿಗೆ ಸರ್ಕಾರ ಉತ್ತೇಜನ ಕೊಡುವುದು ಸರ್ಕಾರ ನೀತಿಯಾಗಿ ಆ ನೀತಿಯನ್ನು ಸಹ ಘೋಷಣೆ ಮಾಡಲಾಗಿದೆ.

ಶ್ರೀ ಹರ್ಷಕುಮಾರ ಗೌಡ:– ಮೈಸೂರು ನಗರದಲ್ಲಿ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ?

ಅಧ್ಯಕ್ಷರು:– ಮಾಹಿತಿಯನ್ನು ಒದಗಿಸುತ್ತಾರೆ ಬಿಡಿ.

ಇತಿಹಾಸ ಪ್ರಸಿದ್ಧವಾದ ಮುಲ್ಕಿಗೆ ಸುವಿಹಾರಿ ಬಸ್

96 (688) ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ – ಮೂಡಬಿದರೆ):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಲ್ಕಿಗೆ ಮತ್ತು ಆಸುಪಾಸಿನ ಜನರಿಗೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸುವಿಹಾರಿ ಬಸ್ ಮುಲ್ಕಿಯಿಂದ ಹೊರಡದೇ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತೊಂದರೆಯಾಗಿದ್ದಲ್ಲಿ, ಒಂದು ಸುವಿಹಾರಿ ಬಸ್ಸನ್ನು ಹಾಕುವ ವಿಷಯದ ಬಗ್ಗೆ, ಸರ್ಕಾರ ಆಸಕ್ತಿ ತೋರದಿರಲು ಕಾರಣವೇನು;

ಇ) ಸುವಿಹಾರಿ ಬಸ್ಸನ್ನು ಹಾಕದೆ ಆದಾಯ ಕಡಿಮೆ ಇದೆ ಎಂದು ತೋರಿಸುವುದು ಸರಿಯೇ;

ಈ) ಕಳೆದ ಅಧಿವೇಶನದ ಸಮಯದಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಎಲ್ಲ ಬಸ್‌ಗಳಿಗೂ ಮುಲ್ಕಿಯಲ್ಲಿ ನಿಲುಗಡೆ ಇದೆಯೆಂದು ತಿಳಿಸಿದ್ದು ಯಾವ ಯಾವ ಬಸ್‌ಗೆ ನಿಲುಗಡೆ ಇದೆಯೆಂದು ತಿಳಿಸಿರುವರು;

ಉ) ಕುಂದಾಪುರ ಉಡುಪಿಗಳಿಂದ ಬೆಂಗಳೂರಿಗೆ ಬರುವ ಯಾವ ಬಸ್‌ಗೆ ಮುಲ್ಕಿಯಲ್ಲಿ ನಿಲುಗಡೆ ಅವಕಾಶ ಕಲ್ಪಿಸಲಾಗಿದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ದಿನಾಂಕ: 1–4–80ರಿಂದ ಆರೆ ಸುಖಾಸೀನ ಸಾರಿಗೆಯನ್ನು ಮುಲ್ಕಿಯಿಂದ ಪ್ರಾರಂಭಿಸಿ